## ಕಿರುಸುದ್ದಿ

### ಗಣೇಶೋತ್ಸವ ಸಹಬಾಳ್ವೆಯ ಸಂಕೇತ



**◆ ಕೆ.ಆರ್ .ಪುರ:** ಶಾಂತಿ, ಸಹಬಾಳ್ವೆಯನ್ನು ಸಾರುವ ಮಹತ್ವದ ಹಬ್ಬವೇ ಗಣೇಶ ಚತುರ್ಥಿ ಎಂದು ಶಾಸಕ ಬಿ.ಎ.ಬಸವರಾಜ ತಿಳಿಸಿದರು. ಕ್ಷೇತ್ರದ ವಿಜಿನಾಪುರದಲ್ಲಿ ಬಿಜೆಪಿ ಮುಖಂಡ ಪ್ರದೀಪ್ ಗೌಡ ನೇತೃತ್ವದಲ್ಲಿ ಆಯೋಜಿಸಿದ್ದ ಗಣೇಶೋತ್ಸವದಲ್ಲಿ ಭಾಗವಹಿಸಿ ಅವರು ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಯುವಕರನ್ನು ಒಗ್ಗೂಡಿಸುವ ಸಲುವಾಗಿ ಬಾಲಗಂಗಾಧರ ತಿಲಕರು ಕೈಗೊಂಡ ಮಹತ್ಕಾರ್ಯ ಇಂದು ಸಹ ನಡೆಯುತ್ತಿದ್ದು, ಯುವಪೀಳಿಗೆಯನ್ನು ಒಗ್ಗೂಡಿಸುವ ಮತ್ತು ಹಿಂದು ಧರ್ಮವನ್ನು ಬಲಪಡಿಸುತ್ತಿರುವುದು ಪ್ರೇರಕ ಶಕ್ತಿಯಾಗಿದೆ ಎಂದರು. ಗಣೇಶ ಮೂರ್ತಿ ಪ್ರತಿಷ್ಠಾಪನೆಯಿಂದ ನಾಗರಿಕ ವಲಯದಲ್ಲಿ ಜಾಗೃತಿ ಸೇರಿದಂತೆ ಭಕ್ತಿಭಾವಗಳನ್ನು ಹೆಚ್ಚಿಸುತ್ತದೆ. ಕ್ಷೇತ್ರದ ವಿವಿಧೆಡೆಗಳಲ್ಲಿ ಶಾಂತಿಯುತವಾಗಿ ಗಣೇಶೋತ್ಸವಗಳು ನಡೆದಿದ್ದು ಯಾವುದೇ ಅಹಿತಕರ ಘಟನೆಗಳು ನಡೆಯಂತೆ ಎಚ್ಚರ ವಹಿಸಲಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಆಯೋಜಕ ಪ್ರದೀಪ್ ಗೌಡ, ಮಂಡಲ ಅಧ್ಯಕ್ಷ ಮುನೇಗೌಡ ಮತ್ತಿತರರಿದ್ದರು.

### ಕ್ರ್ಯಾಕ್ ಚಪ್ಪಲಿಯಲ್ಲಿ ವಿಷಕಾರಿ ಹಾವು: ವ್ಯಕ್ತಿ ಸಾವು

**◆ ಆನೇಕಲ್:** ಕ್ರ್ಯಾಕ್ಸ್ ಚಪ್ಪಲಿ ಒಳಗೆ ಸೇರಿದ ವಿಷಕಾರಿ ಹಾವು ಕಚ್ಚಿ ವ್ಯಕ್ತಿಯೊರ್ವ ಮೃತಪಟ್ಟಿರುವ ಘಟನೆ ಬನ್ನೇರುಘಟ್ಟದ ರಂಗನಾಥ ಬಡಾವಣೆಯಲ್ಲಿ ನಡೆದಿದೆ. ಹಾವು ಕಡಿತದಿಂದ ಮಂಜುಪ್ರಕಾಶ್(41) ಮೃತ ವ್ಯಕ್ತಿ. ಕ್ರ್ಯಾಕ್ಸ್ ಚಪ್ಪಲಿ ಒಳಗಡೆ ಕೊಳಕು ಮಂಡಲ ಹಾವು ಸೇರಿಕೊಂಡಿತ್ತು. ಇದನ್ನು ಗಮನಿಸಿದೆ ಧರಿಸಿಕೊಂಡಾಗ ಹಾವು ಕಚ್ಚಿದೆ. ಇದನ್ನು ಗಮನಿಸದೆ ಹೊರಗಡೆ



ತಿರುಗಾಡಿಕೊಂಡು ಬಂದು ರಾತ್ರಿ ಮಲಗಿದ್ದಾರೆ. ಈ ಸಂದರ್ಭದಲ್ಲಿ ವಿಷವೇರಿ ಮೃತನಾಗಿದ್ದಾನೆ. ಈ ಹಿಂದೆ ನಡೆದಿದ್ದ ಅಪಘಾತದಲ್ಲಿ ಕಾಲು ಸ್ಪರ್ಶ ಕಳೆದುಕೊಂಡಿತ್ತು. ರಾತ್ರಿ ಹಾವು ಕಚ್ಚಿರುವುದು ತಿಳಿಯಲಿಲ್ಲ. ನೆರೆಮನೆಯ ನಿವಾಸಿಗಳು ಚಪ್ಪಲಿಯಲ್ಲಿ ಹಾವು ಸೇರಿ ಕೊಂಡಿರುವುದನ್ನು ನೋಡಿ ತಿಳಿಸಿದ್ದಾರೆ. ಅಷ್ಟರಲ್ಲಿ ಮಂಜು ಪ್ರಕಾಶ್ ಅವರು ಪೂರ್ಣಪಟ್ಟದಲ್ಲಿ ವಿಷವೇರಿ ಮೃತರಾಗಿರುವುದು ಕಂಡಿ ಬಂದಿತ್ತು. ಚಪ್ಪಲಿ ಒಳಗಡೆ ಹಾವು ಸಹ ಸತ್ತಿದೆ. ಮೃತದೇಹ ಮರಣೋತ್ತರ ಪರೀಕ್ಷೆಗಾಗಿ ಆನೇಕಲ್ ಸರ್ಕಾರಿ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಅಮೆರಿಕಾದಲ್ಲಿ ನಂದಿನಿ ಉತ್ಪನ್ನ ಬಿಡುಗಡೆ

**◆ ಬೆಂಗಳೂರು / ಫ್ಲೋರಿಡಾ :** ಕನ್ನಡ ನಾಡಿನ ಹೆಮ್ಮೆಯ ಕೆಎಂಎಫ್ ನಂದಿನಿ ಬ್ರ್ಯಾಂಡಿನ ಎಲ್ಲ ಉತ್ಪನ್ನವನ್ನು ಅಮೆರಿಕ ದೇಶದ ಫ್ಲೋರಿಡಾದ ಲೇಕ್ ಲ್ಯಾಂಡ್ ನಲ್ಲಿ ಅಧಿಕೃತವಾಗಿ ಇಂದು ನಡೆದ ನಾವಿಕ ಸಮ್ಮೇಳನದಲ್ಲಿ ಬಿಡುಗಡೆ ಮಾಡಲಾಯಿತು. ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಅಭೂತಪೂರ್ವ ಕಾರ್ಯಕ್ರಮದಲ್ಲಿ ಸಚಿವರಾದ ಶಿವರಾಜ್ ತಂಗಡಗಿ, ಶಾಸಕರಾದ ರವಿ ಗಾಣಿಗ, ಅರವಿಂದ ಬೆಲ್ಲದ್, ನಟಿ ರಮ್ಯ, ನಟರಾದ ಶ್ರೀನಾಥ್, ರಕ್ಷಿತ್ ಶೆಟ್ಟಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ನಾವಿಕದ ಶಿವಕುಮಾರ್ ಮತ್ತು ಹರ್ಷಿತ್ ಗೌಡ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

ಪಟಾಕಿ ಸ್ಫೋಟ ಪ್ರಕರಣ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಸಚಿವ ಕೆಎಚ್‌ಎಂ ಭೇಟಿ| ಆರೋಗ್ಯ ಕುರಿತು ವಿಚಾರಣೆ

# ಅವಘಡ ಸಂಭವಿಸದಂತೆ ಜಾಗ್ರತೆ ಇರಲಿ



**◆ ದೊಡ್ಡಬಳ್ಳಾಪುರ:** ಗಣೇಶ ಮೂರ್ತಿ ವಿಸರ್ಜನೆ ವೇಳೆ ಕಾರ್ಯಕ್ರಮ ಆಯೋಜಕರು ಜಾಗ್ರತೆ ವಹಿಸ ಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಮನವಿ ಮಾಡಿದರು.

ನಗರದ ಮುತ್ತೂರು ವಾರ್ಡ್ ಬಳಿ ಶುಕ್ರವಾರ ಸಂಜೆ ಗಣೇಶ ವಿಸರ್ಜನೆ ಮೆರವಣಿಗೆ ಸಮಯದಲ್ಲಿ ಸಂಭವಿಸಿದ ಪಟಾಕಿ ಸ್ಫೋಟದಿಂದ ಗಾಯಗೊಂಡು ದೊಡ್ಡಬಳ್ಳಾಪುರದ ಆದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಇಬ್ಬರು ಗಾಯಾಳುಗಳನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು ಬಳಿಕ ವೈದ್ಯರೊಂದಿಗೆ ಚರ್ಚಿಸಿದರು. ಗಾಯಾಳುಗಳ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿ ಪಡೆದು ಸೂಕ್ತ ಚಿಕಿತ್ಸೆ ನೀಡಲು ಸೂಚಿಸಿದರು. ನಂತರ ಟೌನ್ ನ ಮುತ್ತೂರು ವಾರ್ಡ್ ನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಅವಘಡ ಸಂಭವಿಸಿದ್ದು ಹೇಗೆ ಎಂಬುದರ ಬಗ್ಗೆ ಪೊಲೀಸರಿಂದ ಮಾಹಿತಿ ಪಡೆದುಕೊಂಡವರು ನಂತರ ಮಾತನಾಡಿ, ಈ ರೀತಿಯ ಘಟನೆಗಳು ಮುಂದೆ ಆಗಬಾರದು. ಜಿಲ್ಲಾದ್ಯಂತ ಗಣೇಶ ಮೂರ್ತಿ ಪ್ರತಿಷ್ಠಾಪನೆ ಸ್ಥಳಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಆಯೋಜಕರಿಗೆ ಪಟಾಕಿ ಸಿಡಿಸದಂತೆ ಸೂಚನೆ ನೀಡಬೇಕೆಂದರು.

ಗಣೇಶ ವಿಸರ್ಜನೆ ಸಮಯದಲ್ಲಿ ಮೆರವಣಿಗೆ, ಸಂಭ್ರಮದ ಸಂದರ್ಭದಲ್ಲಿ ಸೂಕ್ತ ಬಂದೋಬಸ್ತ್ ಕಲ್ಪಿಸಿ ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು. ಹಾಗೇ ಜಿಲ್ಲೆಯಲ್ಲಿ ಇನ್ನೂ ಮುಂದೆ ಇನ್ನಿತರೇ ಯಾವುದೇ ಕಾರ್ಯಕ್ರಮದಲ್ಲಿ ಪಟಾಕಿ ಸಿಡಿಸದಂತೆ ನೋಡಿಕೊಳ್ಳಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಎ.ಬಿ. ಬಸವರಾಜು, ಎಸಿ ದುರ್ಗಾಶ್ರೀ, ಡಿವೈಎಸ್ಪಿ ರವಿ, ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ರಾಜಣ್ಣ, ಸ್ಥಳೀಯ ಜನಪ್ರತಿನಿಧಿಗಳು, ಇತರರು ಉಪಸ್ಥಿತರಿದ್ದರು.

## ಗಣೇಶ ಮೂರ್ತಿ ಮೆರವಣಿಗೆ ವೇಳೆ ಪಟಾಕಿ ಬಳಕೆ ನಿಷೇಧ

**◆ ದೊಡ್ಡಬಳ್ಳಾಪುರ:** ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ನಗರದ ಮುತ್ತೂರಿನಲ್ಲಿ ಸಂಭವಿಸಿದ ದುರ್ಘಟನೆ ಬೆನ್ನಲ್ಲೇ ಪಟಾಕಿ ಬಳಕೆಯನ್ನು ನಿಷೇಧಿಸಿ ಜಿಲ್ಲಾಧಿಕಾರಿ ಎ.ಬಿ. ಬಸವರಾಜು ಆದೇಶಿಸಿದ್ದಾರೆ.

ಈ ಕುರಿತಂತೆ ಆದೇಶ ಹೊರಡಿಸಿರುವ ಅವರು, ನಗರದ ಮುತ್ತೂರು ಗ್ರಾಮದಲ್ಲಿ ಗಣೇಶ ವಿಸರ್ಜನೆ ಸಮಯದಲ್ಲಿ ಪಟಾಕಿ ಸ್ಫೋಟದ ಹಿನ್ನೆಲೆಯಲ್ಲಿ 14 ವರ್ಷದ ಮುನಿ(ಧನುಷ್ ರಾವ್) ಎಂಬ ಓರ್ವ ಬಾಲಕ ಮರಣ ಹೊಂದಿದ್ದಾನೆ. ಪೊಲೀಸ್ ಸಿಬ್ಬಂದಿ ಜಾಕೀರ್ ಹುಸೇನ್, ನಾಗರಾಜು, ಪವರ್‌ಲಿಫ್ಟ್ ವಾಹನ ಆಪರೇಟರ್ ಮುನಿರಾಜು, ಚೇತನ್, ಗಣೇಶ್, ಲೋಕೇಶ್, ಮುನಿಅಕ್ಕಯ್ಯಮ್ಮ ಯೋಗೇಶ್, ಧನಂಜಯ ಸೇರಿ ಒಂಬತ್ತು ಜನರು ತೀವ್ರವಾಗಿ ಗಾಯಗೊಂಡಿದ್ದರು.

ಈ ಹಿನ್ನೆಲೆಯಲ್ಲಿ 2025-26ನೇ ಸಾಲಿನ ಗೌರಿ-ಗಣೇಶ ಹಬ್ಬದ ಪ್ರಯುಕ್ತ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸುಮಾರು 1800 ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಸಾರ್ವಜನಿಕ ಹಿತದೃಷ್ಟಿ ಹಾಗೂ ಮುಂಜಾಗ್ರತಾ ಕ್ರಮವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲಾದ್ಯಂತ ಗಣೇಶ ಪ್ರತಿಷ್ಠಾಪನೆ, ವಿಸರ್ಜನಾ ಸಮಯದಲ್ಲಿ ಪಟಾಕಿ ಸ್ಫೋಟಿಸದಂತೆ ಸೂಚಿಸಲಾಗಿದೆ.



ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಸೇರುವ ಸ್ಥಳ ಮತ್ತು ಯಾವುದೇ ರಾಜಕೀಯ ಹಾಗೂ ಧಾರ್ಮಿಕ ಸಮಾವೇಶ ಕಾರ್ಯಕ್ರಮದಲ್ಲಿ ಪಟಾಕಿ, ಸಿಡಿಮದ್ದು ಮತ್ತು ಇನ್ನಿತರೆ ಸ್ಫೋಟಕ ವಸ್ತುವನ್ನು ಸಿಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಿ ಆದೇಶಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ ಬೆನ್ನಲ್ಲೇ ಪೊಲೀಸ್ ಇಲಾಖಾಧಿಕಾರಿಗಳು, ಪಟಾಕಿ, ಸಿಡಿಮದ್ದು ಮತ್ತು ಇನ್ನಿತರೆ ಸ್ಫೋಟಕ ವಸ್ತುವನ್ನು ಸಿಡಿಸಬಾರದು ಎಂದು ಗಣೇಶ ಕಾರ್ಯಕ್ರಮದ ಆಯೋಜಕರಿಗೆ ಸೂಚನೆ ನೀಡಲಾಗಿದೆ.

## ಶ್ರೀಕ್ಷೇತ್ರದ ಸುರಕ್ಷತೆಗೆ ಸವಾಲೊಡ್ಡುವ ತಂತ್ರ



**◆ ದೇವನಹಳ್ಳಿ:** ಧರ್ಮಸ್ಥಳ ಕ್ಷೇತ್ರದ ಮೇಲೆ ನಡೆದಿರುವ ಷಡ್ಯಂತ್ರರಾಷ್ಟ್ರೀಯ ಸುರಕ್ಷತೆಗೆ ಸವಾಲೊಡ್ಡುವಂತಹ ಪ್ರಕರಣ ವಾಗಿದೆ. ಎನ್‌ಐಎ,ಇಡಿ ಮೂಲಕ ತನಿಖೆ ನಡೆಸಲು ಪ್ರಧಾನಿ, ಕೇಂದ್ರದ ಗೃಹ ಸಚಿವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಶ್ವ ಹಿಂದೂ ಪರಿಷದ್, ಬಜರಂಗದಳ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ವಿಶ್ವ ಹಿಂದೂ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಮಾತನಾಡಿ, ಧರ್ಮಸ್ಥಳ ದೇವಸ್ಥಾನದ ಮೇಲಿರುವ ಧಾರ್ಮಿಕ ಶ್ರದ್ಧಾಭಕ್ತಿಗೆ ಧಕ್ಕೆಯುಂಟುಮಾಡಬೇಕೆಂಬ ಷಡ್ಯಂತ್ರದ ಹಿಂದೆ ರಾಷ್ಟ್ರ ವಿರೋಧಿಗಳ ಕೈವಾಡ ವಿದೆಂದು ಆರೋಪಿಸಿರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಧರ್ಮಸ್ಥಳದ ಘನತೆಗೆ ಚ್ಯುತಿತಂದು ಮಾನಹರಣ ಮಾಡ ಬೇಕೆಂಬ ಉದ್ದೇಶದಿಂದ ವ್ಯವಸ್ಥಿತ ಸಂಚು ರೂಪಿಸಿದ್ದಾರೆ. ಇದರ ಹಿಂದಿರುವ ಶಕ್ತಿ ಯಾವುದು ಎಂಬುದನ್ನು ತನಿಖೆ ನಡೆಸಿ ಪತ್ತೆ ಮಾಡಬೇಕಾಗಿದೆ ಎಂದು ಆಗ್ರಹಿಸಿದರು. ಬಜರಂಗದಳ ಜಿಲ್ಲಾ ಸಂಯೋಜಕ ಕೃಷ್ಣ ಮೂರ್ತಿ ಮಾತನಾಡಿ, ಭಯೋತ್ಪಾನೆಯ ಕಾರಣಕ್ಕಾಗಿ ದೇಶದಲ್ಲಿ ನಿಷೇಧಗೊಂಡಿರುವ ಪಿಎಫ್‌ಐ ಸಂಘಟನೆಯ ರಾಜಕೀಯ ಆಯಾಮವೆಂದೇ ಗುರುತಿಸಿಕೊಂಡಿರುವ ಎಸ್‌ಡಿಪಿಐ ಎಂಬ ಮೂಲಭೂತವಾದಿ ರಾಜಕೀಯ ಪಕ್ಷ ಕೂಡ ಅಪಪ್ರಚಾರ ಮಾಡಿದವರ, ದೂರುದಾರರ, ಷಡ್ಯಂತ್ರ ಮಾಡಿದವರ ಪರವಾಗಿ ಪ್ರತಿಭಟನೆ ನಡೆಸಿದೆ. ಜನಸಾಮಾನ್ಯರಲ್ಲಿ ಆತಂಕ ಮನೆಮಾಡಿದೆ ಎಂದು ಆತಂಕ ಉಂಟು ಮಾಡಿದೆಂದರು. ಕೇಂದ್ರ ಸರ್ಕಾರ ಈ ಕೂಡಲೇ ಮಧ್ಯೆ ಪ್ರವೇಶಿಸಿ ರಾಷ್ಟ್ರೀಯ ತನಿಖಾ ಸಂಸ್ಥೆ ಹಾಗು ಜಾರಿ ನಿರ್ದೇಶನಾಲಯದ (ಇಡಿ) ಮೂಲಕ ಧರ್ಮಸ್ಥಳದ ವಿರುದ್ಧ ಜರುಗಿರುವ ಷಡ್ಯಂತ್ರದ ಸಮಗ್ರ ತನಿಖೆ ನಡೆಸುವಂತೆ ರಾಜ್ಯದ ಜನತೆಯ ಪರವಾಗಿ ಆಗ್ರಹಿಸುತ್ತಿರುವುದಾಗಿ ತಿಳಿಸಿದ್ದಾರೆ. ಕೋಲಾರ ವಿಭಾಗ ಸಂಘಟನಾ ಕಾರ್ಯದರ್ಶಿ ಸಾಗರ, ಜಿಲ್ಲಾ ಕಾರ್ಯದರ್ಶಿ ರವಿ, ಜಿಲ್ಲಾ ಉಪಾಧ್ಯಕ್ಷ ಅನಂದ್ , ಜಿಲ್ಲಾ ಸಾಮಾಜಿಕ ಸಾಮರಸ್ಯ ಪ್ರಮುಖ್ ಸೋಮಶೇಖರ್ ಸೇರಿದಂತೆ ವಿವಿಧ ತಾಲೂಕಿನ ಪದಾಧಿಕಾರಿಗಳಿದ್ದರು.





ಕನ್ನಡ ನಾಡಿನ ಹೆಮ್ಮೆಯ ಕೆಎಂಎಫ್ ನಂದಿನಿ ಬ್ರ್ಯಾಂಡಿನ ಎಲ್ಲ ಉತ್ಪನ್ನವನ್ನು ಅಮೆರಿಕ ದೇಶದ ಫ್ಲೋರಿಡಾದ ಲೇಕ್ ಲ್ಯಾಂಡ್ ನಲ್ಲಿ ಅಧಿಕೃತವಾಗಿ ಇಂದು ನಡೆದ ನಾವಿಕ ಸಮ್ಮೇಳನದಲ್ಲಿ ಬಿಡುಗಡೆ ಮಾಡಲಾಯಿತು.

## ದುಶ್ಚಟ ಬಿಟ್ಟು ನೆಮ್ಮದಿಯಾಗಿ ಜೀವಿಸಿ

**◆ ದೊಡ್ಡಬಳ್ಳಾಪುರ:** ನೆಮ್ಮದಿ ಜೀವನಕ್ಕಾಗಿ ಯುವಕರು ದುಶ್ಚಟ ಬಿಟ್ಟು ಸಮಾಜದ ಒಳಿತಿಗಾಗಿ ಜೀವಿಸ ಬೇಕೆಂದು1972ನೇ ಮದ್ಯವರ್ಜನ ಶಿಬಿರದ ಅಧ್ಯಕ್ಷ ಕೆ.ಎಂ. ಕೃಷ್ಣಮೂರ್ತಿ ಹೇಳಿದರು. ಅವರು ತಾಲೂಕಿನ ಪುಷ್ಪಾಂಡಜ ಮಹರ್ಷಿ ಆಶ್ರಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಆಯೋಜಿಸಿದ್ದ ಮದ್ಯವರ್ಜನ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿ, ಸಮಾಜದಲ್ಲಿ ವ್ಯಸನಕ್ಕೆ ಬಲಿಯಾಗಿ ತನ್ನ ಜೀವ ಮತ್ತು ಜೀವನವನ್ನು ಹಾಳುಮಾಡಿಕೊಳ್ಳುವ ವ್ಯಕ್ತಿಗಳ ಮನಃಪರಿವರ್ತನೆ ಮಾಡುವ ಮೂಲಕ ಒಂದು ಸುಂದರ ಬದುಕಿಗೆ ಮರಳುವ ಅವಕಾಶವನ್ನು ಈ ಶಿಬಿರದಿಂದ ಸಾಧ್ಯವಾಗಿದೆಂದರು. ಮದ್ಯಪಾನ ಮುಕ್ತ ಕುಟುಂಬವನ್ನು ಕಟ್ಟುವ ಪರಿಕಲ್ಪನೆಯ ಮೂಲಕ ಮದ್ಯವರ್ಜನ ಶಿಬಿರವನ್ನು ನಡೆಸುತ್ತಿರುವ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರ ಕಾರ್ಯಕ್ರಮ ಸಮಾಜದಲ್ಲಿ ಮಾದರಿಯಾಗಿದೆ. ಒಂದು ಉತ್ತಮ ಕಾರ್ಯಕ್ರಮವಾಗಿದೆ. ಈ ಮದ್ಯವರ್ಜನ ಶಿಬಿರದಿಂದಾಗಿ ಸಮಾಜದಲ್ಲಿ ಉತ್ತಮವಾದ ಸ್ಥಾನವನ್ನು ಪಡೆಯುವಂತಾಗಿದೆ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ದರ್ಗಾ ಜೋಗಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಶಿಕಲಾ, ನಗರಸಭೆ ಸದಸ್ಯ ತ.ನ. ಪ್ರಭುದೇವ್ , ನಿವೃತ್ತ ಶಿಕ್ಷಕ ಕೆ.ಮಹಾಲಿಂಗಯ್ಯ, ಕಲಾವಿದರ ಸಂಘದ ಅಧ್ಯಕ್ಷ ಡಾ.ಕೆಂಪಣ್ಣ, ಜನಜಾಗೃತಿ ವೇದಿಕೆ ಉಪಾಧ್ಯಕ್ಷ ನರಸಿಂಹರಾಜು, ಸಂಸ್ಥೆಯ ಜಿಲ್ಲಾ ನಿರ್ದೇಶಕ ಉಮಾರಬ್ಬ, ಕಂಟನಕುಂಟೆ ಗ್ರಾಮಪಂಚಾಯಿತಿ ಅಧ್ಯಕ್ಷೆ ಶೋಭಾರಾಜ್, ಜಿಲ್ಲಾ ಜನಜಾಗೃತಿ ಸದಸ್ಯರಾದ ವಾಣಿ, ಮಮತಾ, ಪುಷ್ಪ, ಧರ್ಮೇಂದ್ರ, ರಮೇಶ್, ಯೋಜನಾಧಿಕಾರಿಗಳಾದ ತಿಮ್ಮಯ್ಯನಾಯ್ಕ್, ದಿನೇಶ್, ಶಿಬಿರಾಧಿಕಾರಿ ದೇವಿಪ್ರಸಾದ್, ಮೇಲ್ವಿಚಾರಕರು, ಸೇವಾಪ್ರತಿನಿಧಿಗಳು ನವಜೀವನ ಸಮಿತಿ ಸದಸ್ಯರಿದ್ದರು.





## ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

ನೊಂದಣಿ ಕಛೇರಿ: ಗ್ರೇಪ್ ಗಾರ್ಡನ್, ನಂ. 27, 3ನೇ 'ಎ' ಕ್ರಾಸ್, 18ನೇ ಮುಖ್ಯ, ಕೋರಮಂಗಲ 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560095, ಕರ್ನಾಟಕ

### ಇ-ಹರಾಜು ನೋಟಿಸ್

ಸೆಕ್ಯುರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ (ಸರ್ಫೇಸಿ ಕಾಯ್ದೆ)-2002 ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ರೂಲ್ಸ್-2002ರ ನಿಯಮ 8(6) & 9(1) ಅಡಿಯಲ್ಲಿ ಮಾರಾಟಕ್ಕೆ ಇ-ಹರಾಜು ನೋಟಿಸ್.
ಈ ಕೆಳಗೆ ಸಹಿ ಮಾಡಿರುವ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯು ಸರ್ಫೇಸಿ ಕಾಯ್ದೆಯ ಸೆಕ್ಷನ್ 13(4)ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಸಾಮಾನ್ಯವಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬ್ಯಾಂಕಿಗೆ ಪಾವತಿಸಲು ಬಾಕಿ ಇರುವ ಮೊತ್ತವನ್ನು ಭರಿಸಿಕೊಳ್ಳುವ ಸಲುವಾಗಿ ಈ ಕೆಳಗೆ ಹೆಸರಿಸಿದ ಖಾತೆಗಳ ಅಡಮಾನ ಆಸ್ತಿಗಳನ್ನು "ಎಲ್ಲಿದೆಯೋ ಅಲ್ಲಿ ಆಧಾರದಲ್ಲಿ" ಮತ್ತು "ಏನು ಇದೆಯೋ ಅದು ಆಧಾರದಲ್ಲಿ" ಈ ಕೆಳಗೆ ನಿರ್ದಿಷ್ಟಪಡಿಸಿದ ದಿನಾಂಕಗಳಂದು ಇ-ಹರಾಜು ನಡೆಸಲಾಗುತ್ತಿದೆ.

| ಕ್ರ. ಸಂ | ಸಾಲ ಖಾತೆ ಸಂಖ್ಯೆ/ ಸಾಲಗಾರರು/ ಸಹ ಸಾಲಗಾರರು/ ಜಾಮೀನುದಾರರ ಹೆಸರು | (1) ದಿನಾಂಕ 13-2ರ ನೋಟಿಸ್ & ದಿನಾಂಕದವರೆಗೆ ಡಿಮ್ಯಾಂಡ್ ಮಾಡಲಾದ ಮೊತ್ತ (2) ಸ್ವಾಧೀನ ದಿನಾಂಕ | ಪ್ರಸ್ತುತ ಬಾಕಿ ಮೊತ್ತ | ಮೀಸಲು ಬೆಲೆ ರೂಪಾಯಿಗಳಲ್ಲಿ | ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಂಡಿ) ರೂಪಾಯಿಗಳಲ್ಲಿ |
|---|---|---|---|---|---|
| ಶಾಖಾ ಕಚೇರಿ: ನಂ. 315/2, ನೆಲಮಹಡಿ, ವಾರ್ಡ್ ನಂ. 21, ವಿದ್ಯಾನಗರ, ಬಿ.ಎಚ್.ರಸ್ತೆ, ತುಮಕೂರು, ಕರ್ನಾಟಕ- 572101 | | | | | |
| 1. | 1133210170000107<br>1. ಶ್ರೀ ಗಿರೀಶ್<br>2. ಶ್ರೀ ನಾಗರಾಜು | (1). 08.07.204 & ದಿನಾಂಕ: 24.06.204ಕ್ಕೆ ಇದ್ದಂತೆ ರೂ. 5,33,655 (ರೂಪಾಯಿ ಐದು ಲಕ್ಷದ ಮೂವತ್ತ ಮೂರು ಸಾವಿರದ ಆರು ನೂರ ಐವತ್ತೈದು ಮಾತ್ರ)<br>(2). ಸಾಂಕೇತಿಕ ಸ್ವಾಧೀನ 08.10.2024<br>ಭೌತಿಕ ಸ್ವಾಧೀನ 23.05.2025 | 24.07.2025ಕ್ಕೆ ಇದ್ದಂತೆ ರೂ. 6,73,399.69 (ರೂಪಾಯಿ ಆರು ಲಕ್ಷದ ಎಪ್ಪತ್ತಮೂರು ಸಾವಿರದ ಮೂರು ನೂರ ತೊಂಬತ್ತೊಂಬತ್ತು ಮತ್ತು ಪೈಸೆ ಅರುವತ್ತೊಂಬತ್ತು ಮಾತ್ರ) | ₹ 5,50,000/- (ರೂಪಾಯಿ ಐದು ಲಕ್ಷದ ಐವತ್ತು ಸಾವಿರ ಮಾತ್ರ) | ₹ 55,000/- (ರೂಪಾಯಿ ಐವತ್ತೈದು ಸಾವಿರ ಮಾತ್ರ) |
| ಆಸ್ತಿಯ ಶೆಡ್ಯೂಲ್: ಗ್ರಾಮಪಂಚಾಯ್ತಿ ಖಾತೆ ನಂಬರ್ 218/218 (ಹಳೆ ಖಾತೆ ಸಮಖ್ಯೆ 55/56) ಮತ್ತು ಇ-ಖಾತೆ ಸಂಖ್ಯೆ :1525009008400224 ಸ್ಥಿರಾಸ್ತಿಯ ಎಲ್ಲ ತುಂಡು ಮತ್ತು ತುಣುಕುಗಳು. ಪೂರ್ವದಿಂದ ಪಶ್ಚಿಮಕ್ಕೆ: 4.75499 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: 11.5824 ಮೀಟರ್. ವಿಳಾಸ: ಹಿರೇಗುಂದಗಲ್ ಗ್ರಾಮ, ಹಿರೇಗುಂದಗಲ್ ಹೋಬಳಿ, ತುಮಕೂರು ತಾಲೂಕು ಮತ್ತು ಕೈಗೊಂಡ ಎಲ್ಲ ಸುಧಾರಣೆಗಳು. ಗಡಿಗಳು- ಪೂರ್ವಕ್ಕೆ: ಅಂಜಿನಪ್ಪ ಅವರ ಆಸ್ತಿ, ಪಶ್ಚಿಮಕ್ಕೆ: ದೊಡ್ಡಹನುಮಂತಯ್ಯ ಅವರ ಆಸ್ತಿ, ಉತ್ತರಕ್ಕೆ: ಕೆಂಪಕ್ಕ ಅವರ ಆಸ್ತಿ. ದಕ್ಷಿಣಕ್ಕೆ: ರಸ್ತೆ. | | | | | |
| ಶಾಖಾ ಕಚೇರಿ: ನೆಲಮಹಡಿ, 15ನೇ ಅಡ್ಡರಸ್ತೆ, ಆರ್.ಪಿ.ರಸ್ತೆ, ಶ್ರೀಕಂಠಪುರಿ ಬಡಾವಣೆ, ನಂಜನಗೂಡು, ಕರ್ನಾಟಕ- 571301. | | | | | |
| 2. | 1153210080000002<br>1. ಮಹೇಶ ಎಸ್.ಸಿ<br>2. ಶ್ರೀಮತಿ ಪದ್ಮ | (1). 29.09.2021 & ದಿನಾಂಕ: 28.09.2021ಕ್ಕೆ ಇದ್ದಂತೆ ರೂ. 5,55,153 (ರೂಪಾಯಿ ಐದು ಲಕ್ಷದ ಐವತ್ತೈದು ಸಾವಿರದ ಒಂದು ನೂರ ಐವತ್ತಮೂರು ಮಾತ್ರ)<br>(2). ಸಾಂಕೇತಿಕ ಸ್ವಾಧೀನ 14.09.2022<br>ಭೌತಿಕ ಸ್ವಾಧೀನ 19.06.2025 | 24.07.2026ಕ್ಕೆ ಇದ್ದಂತೆ ರೂ. 11,66,069.37 (ರೂಪಾಯಿ ಹನ್ನೊಂದು ಲಕ್ಷದ ಅರುವತ್ತಾರು ಸಾವಿರದ ಅರುವತ್ತೊಂಬತ್ತು ಮತ್ತು ಪೈಸೆ ಮೂವತ್ತೇಳು ಮಾತ್ರ) | ₹ 5,14,000/- (ರೂಪಾಯಿ ಐದು ಲಕ್ಷದ ಹದಿನಾಲ್ಕು ಸಾವಿರ ಮಾತ್ರ) | ₹ 51,400/- (ರೂಪಾಯಿ ಐವತ್ತೊಂದು ಸಾವಿರದ ನಾಲ್ಕು ನೂರು ಮಾತ್ರ) |
| ಆಸ್ತಿಯ ಶೆಡ್ಯೂಲ್: ಪುರಸಭಾ ಅಸೆಸ್‌ಮೆಂಟ್ ಸಂಖ್ಯೆ: 549/549 ಪಿಐಡಿ ಸಂಖ್ಯೆ: 15220050100201372 ಸ್ಥಿರಾಸ್ತಿಯ ಎಲ್ಲ ತುಂಡು ಮತ್ತು ತುಣುಕುಗಳು. ಅಳತೆ- ಪೂರ್ವದಿಂದ ಪಶ್ಚಿಮಕ್ಕೆ: 9.144 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: 6.7056 ಮೀಟರ್, ಒಟ್ಟು ವಿಸ್ತೀರ್ಣ: 61.32 ಚದರ ಮೀಟರ್ ಮತ್ತು ಕಟ್ಟಡ. ವಿಳಾಸ: ಸುತ್ತೂರು ಗ್ರಾಮ, ಬಿಳಿಗೆರೆ ಹೋಬಳಿ, ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ ಮತ್ತು ಗಡಿಗಳು- ಪೂರ್ವಕ್ಕೆ: ಗಲ್ಲಿ ಮತ್ತು ರಾಮಮಂದಿರ, ಪಶ್ಚಿಮಕ್ಕೆ: ಗಲ್ಲಿ ಮತ್ತು ಮಾದು ಮತ್ತು ರಂಗಸ್ವಾಮಿಯವರ ಮನೆ, ಉತ್ತರಕ್ಕೆ: ರಾಮಶೆಟ್ಟಿ ಮತ್ತು ಮಲಿಗನಾಯಕ ಮತ್ತು ಅವರ ತಿರುಗಾಡುವ ದಾರಿ, ದಕ್ಷಿಣಕ್ಕೆ: ಸ್ವಂತ ಇವೇಶನ ಮತ್ತು ಹೊಂದಿಕೊಂಡಿರುವ ಇತರ ಎಲ್ಲ ಜೋಡಣೆಗಳು ಮತ್ತು ಸಮಾನ ಹಕ್ಕುಗಳು. | | | | | |
| ಶಾಖಾ ಕಚೇರಿ: ನಂ. 6-4-63, ನೆಲಮಹಡಿ, ದ್ವಾರಕ ಆರ್ಕೇಡ್, ವಿ.ವಿ.ಲೇಔಟ್, ಗಂಗಮ್ಮ ಗುಡಿ ರಸ್ತೆ, ಹೊಸಕೋಟೆ, ಬೆಂಗಳೂರು- 562114. | | | | | |
| 3. | 1633210080000049<br>1. ರಾಜಾರೆಡ್ಡಿ ಎನ್<br>2. ಶ್ರೀಮತಿ ಮಮತಾ ಸಿ | 1). 16.02.2022 ಮತ್ತು 15.02.2022ಕ್ಕೆ ಇದ್ದಂತೆ ರೂ. 9,14,785/- (ರೂಪಾಯಿ ಒಂಬತ್ತು ಲಕ್ಷದ ಹದಿನಾಲ್ಕು ಸಾವಿರದ ಏಳು ನೂರ ಎಂಬತ್ತೈದು ಮಾತ್ರ)<br>(2). ಸಾಂಕೇತಿಕ ಸ್ವಾಧೀನ 07.10.2022<br>ಭೌತಿಕ ಸ್ವಾಧೀನ 26.05.2025 | ದಿನಾಂಕ: 24.07.2025ಕ್ಕೆ ಇದ್ದಂತೆ ರೂ. 18,51,317.09 (ರೂಪಾಯಿ ಹದಿನೆಂಟು ಲಕ್ಷದ ಐವತ್ತೊಂದು ಸಾವಿರದ ಮೂರು ನೂರ ಹದಿನೇಳು ಮತ್ತು ಪೈಸೆ ಒಂಬತ್ತು ಮಾತ್ರ) | ₹ 27,10,000/- (ರೂಪಾಯಿ ಇಪ್ಪತ್ತೇಳು ಲಕ್ಷ ಹತ್ತು ಸಾವಿರ ಮಾತ್ರ) | ₹ 2,71,000/- (ರೂಪಾಯಿ ಎರಡು ಲಕ್ಷದ ಎಪ್ಪತ್ತೊಂದು ಸಾವಿರ ಮಾತ್ರ) |
| ಆಸ್ತಿಯ ಶೆಡ್ಯೂಲ್: ಆಸ್ತಿ ಸಂಖ್ಯೆ 66/2, ಇ-ಖಾತೆ ನಂ. 151901101701000068ರ ಎಲ್ಲ ತುಂಡು ಮತ್ತು ತುಣುಕುಗಳು. ಅಳತೆ- 15.849*11.2776 ಮೀಟರ್. ಇದರ ಜತೆಗೆ ಮನೆ. ವಿಳಾಸ: ನೀಲತ್ತೂರು ಗ್ರಾಮ, ರೊನೂರು ಹೋಬಳಿ, ಶ್ರೀನಿವಾಸಪುರ ತಾಲೂಕು, ಕೋಲಾರ ಜಿಲ್ಲೆ. ಪ್ರಸ್ತುತ ಅರಿಕುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿದೆ. ಪೂರ್ವದಿಂದ ಪಶ್ಚಿಮಕ್ಕೆ: 52 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 37 ಅಡಿ. ಒಟ್ಟು ವಿಸ್ತೀರ್ಣ: 1925 ಅಡಿಗಳು. ಗಡಿಗಳು- ಪೂರ್ವಕ್ಕೆ: 3 ಅಡಿ ರಸ್ತೆ, ಪಶ್ಚಿಮಕ್ಕೆ: ರಾಮ ರೆಡ್ಡಿಯವರ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸಂದು ದಾರಿ. ಭೂಮಿ ಮತ್ತು ಕಟ್ಟಡ ಸೇರಿದಂತೆ ಮತ್ತು ಹೊಂದಿಕೊಂಡಿರುವ ಇತರ ಜೋಡಣೆಗಳ ಜತೆಗೆ. | | | | | |

**ಇ-ಹರಾಜು ದಿನಾಂಕ ಮತ್ತು ಸಮಯ: 09.10.2025 ಬೆಳಿಗ್ಗೆ: 11.00 ರಿಂದ ಮಧ್ಯಾಹ್ನ 12.00**

| ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ: | ಆಸ್ತಿಯ ವೀಕ್ಷಣೆ ದಿನಾಂಕ ಮತ್ತು ಸಮಯ: |
|---|---|
| 08.10.2025 ಅಥವಾ ಅದಕ್ಕೂ ಮೊದಲು ಬೆಳಿಗ್ಗೆ 10.00 ರಿಂದ ಸಂಜೆ 5.00 | 07.10.2025ರ ಬೆಳಿಗ್ಗೆ 10.00 ರಿಂದ ಸಂಜೆ 5.00 |

ಹೆಚ್ಚಿನ ವಿವರಗಳಿಗೆ ಬ್ಯಾಂಕಿನ ಅಧಿಕೃತ ಅಧಿಕಾರಿಯನ್ನು ಸಂಪರ್ಕಿಸಿ:
ಕ್ರಮಸಂಖ್ಯೆ.1: ಶ್ರೀ ನವರತ್ನ - 96633 84014, ಕ್ರಮ ಸಂಖ್ಯೆ.2: ಶ್ರೀ ಗಂಗಾಧರ್ ಎಂ - 70191 19973,
ಕ್ರಮಸಂಖ್ಯೆ.3: ಶ್ರೀ ರಾಜು ವಿ - 88929 14019 / ಶೀ ಟಿಜೋ ಸಾಜನ್ - 78451 92961.

ಹರಾಜನ್ನು "ಎಲ್ಲಿದೆಯೋ ಅಲ್ಲಿ" ಮತ್ತು "ಏನಿದೆಯೋ ಅದು ಆಧಾರದಲ್ಲಿ" ನಡೆಸಲಾಗುತ್ತದೆ.
ಇ-ಹರಾಜನ್ನು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಅನುಮೋದಿತ ಇ-ಹರಾಜು ಸೇವಾ ಪೂರೈಕೆದಾರರಾದ ಮೆಸಸ್ ಸಿ1 ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮೂಲಕ ನಡೆಸಲಾಗುತ್ತದೆ. ಸಂಪರ್ಕ ವ್ಯಕ್ತಿ: ಶ್ರೀ ಪ್ರಭಾಕರನ್ (ಮೊಬೈಲ್ ನಂ. 74182 81709). ಉದ್ದೇಶಿತ ಬಿಡ್ಡುದಾರರು ಆಸ್ತಿ ವಿವರಗಳಿಗೆ https://www.bankauctions.com ಅಥವಾ https://www/ujjivansfb.in.e-auctions ಗೆ ಭೇಟಿ ನೀಡಲು ಸಲಹೆ ಮಾಡಲಾಗಿದೆ ಮತ್ತು ಬಿಡ್‌ನಲ್ಲಿ ಭಾಗವಹಿಸಲು ಅವರು ತಮ್ಮ ಹೆಸರುಗಳನ್ನು https://www.bankauctions.com ಪೋರ್ಟಲ್‌ನಲ್ಲಿ ನೋಂದಾಯಿಸಬೇಕು ಮತ್ತು ಉಚಿತವಾಗಿ ತಮ್ಮ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಸಂಭಾವ್ಯ ಬಿಡ್ಡುದಾರರು ಇ-ಹರಾಜಿನ ಬಗ್ಗೆ ಆನ್‌ಲೈನ್ ತರಬೇತಿಯನ್ನು ಸೇವಾಪೂರೈಕೆದಾರರಾದ ಮೆಸಸ್ ಸಿ1 ಇಂಡಿಯಾ ಪ್ರೈವೇಟ್ ಲಿಮಿಟೆಡ್ ಅವರಿಂದ ಪಡೆಯಬಹುದು. ಹೆಲ್ಪ್‌ಲೈನ್ ನಂ. 72919 18824, 25, 26. ಬೆಂಬಲ ಇ-ಮೇಲ್ ಐಡಿ: support@bankeauctions.com mail to: support@bankeauctions.com ಹರಾಜು ಪೋರ್ಟಲ್: https://www.bankauctions.com ಮಾರಾಟದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯವಿಟ್ಟು ನಮ್ಮ ಬ್ಯಾಂಕ್/ ಭದ್ರತಾ ಸಾಲದಾರರ ವೆಬ್‌ಸೈಟ್ ಅಂದರೆ: https://www/ujjivansfb.in.e-auctions/https://www.bankauctions.com ವೀಕ್ಷಿಸಬಹುದು.

ದಿನಾಂಕ: 31.08.2025 ಸಹಿ/- ಅಧಿಕೃತ ಅಧಿಕಾರಿ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್


ಗಿಡಗಂಟೆಯಿಂದ ಬಸ್ ನಿಲ್ದಾಣ ಬೀಳುವ ಸ್ಥಿತಿ| ಮನವಿಗೆ ಸ್ಪಂದಿಸದ ಅಧಿಕಾರಿಗಳು

# ಶಿಥಿಲ ಸ್ಥಿತಿಯಲ್ಲಿ ಪ್ರಯಾಣಿಕರ ತಂಗುದಾಣ

**◆ ತಾವರೆಕೆರೆ:** ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಗ್ರಾಮಗಳಿಗೆ ಸಂಪರ್ಕಿಸುವ ಹಳ್ಳಿಗಳ ಗೇಟ್ ಬಳಿ ಪ್ರಯಾಣಿಕರಿಗಾಗಿ ನಿರ್ಮಿಸಲಾಗಿರುವ ತಂಗುದಾಣ ಶಿಥಿಲಗೊಂಡಿದೆ. ಇಲ್ಲಿ ನಿಲ್ಲುವ ಪ್ರಯಾಣಿಕರ ಮೇಲೆ ಬಿದ್ದಲ್ಲಿ ಪ್ರಾಣಾಪಾಯ ನಿಶ್ಚಿತ ತಂಬಂತಿದೆ.

ಮುಗಬಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲಸಹಳ್ಳಿ ಸಮೀಪ ರಾಷ್ಟ್ರೀಯ ಹೆದ್ದಾರಿ-75ರಲ್ಲಿ ರಸ್ತೆ ಹಾದುಹೋಗಿದೆ. ಈ ರಸ್ತೆ 10 ವರ್ಷದ ಹಿಂದೆಯೇ ನಿರ್ಮಾಣವಾಗಿದೆ. ಹೆದ್ದಾರಿಯ ಮಧ್ಯೆ ಹತ್ತು ಅಡಿ ಆಳದ ಕಾಲುವೆ ನಿರ್ಮಿಸಲಾಗಿದೆ. ತಂಗುದಾಣದ ಬಳಿಗೆ ತೆರಳಲು ಸಾಧ್ಯವಿಲ್ಲದ ಪರಿಸ್ಥಿತಿ ಇದೆ. ಇದೇ ಸ್ಥಳದಲ್ಲಿ 2019ರ ಅಕ್ಟೋಬರ್‌ನಲ್ಲಿ ಸಂಸದರಾಗಿದ್ದ ಬಿ.ಎನ್. ಬಚ್ಚೇಗೌಡರು ಪ್ರಯಾಣಿಕರತಂಗುದಾಣ ನಿರ್ಮಿಸಲು ಗುದ್ದಲಿ ಪೂಜೆ ನೆರವೇರಿಸಿದ್ದರು. ಇದುವರೆಗೆ ನಿರ್ಮಾಣವಾಗಿಲ್ಲ. ಆದರೆ, ಹಲಸಹಳ್ಳಿ, ದಾಸರಹಳ್ಳಿ ಗ್ರಾಮಸ್ಥರು ಒತ್ತಾಯಿಸಿದರೂ ಇಲ್ಲಿವರೆಗೂ ಬಸ್ ನಿಲ್ದಾಣವನ್ನೇ ನಿರ್ಮಿಸಿಲ್ಲ ಎಂಬ ಕೊರಗಿದೆ. ಗ್ರಾಪಂ ಮಾಜಿ ಅಧ್ಯಕ್ಷೆ ಸುಬ್ಬಲಕ್ಷ್ಮೀ ಚಿನ್ನನಾರಾಯಣಸ್ವಾಮಿ ಮಾತನಾಡಿ, ನಮ್ಮ ಗೇಟ್ ಬಳಿ ಇರುವ ತಂಗುದಾಣ ಸಂಪುರ್ಣವಾಗಿ ಶಿಥಿಲಗೊಂಡಿದೆ. ಬೀಳುವ ಹಂತದಲ್ಲಿದೆ. ಅಲ್ಲದೆ, ವೈಜ್ಞಾನಿಕವಾಗಿ ಹತ್ತು ಅಡಿ ಆಳದ ಕಂದಕ ನಿರ್ಮಿಸಲಾಗಿದೆ. ಆದ್ದರಿಂದ ಸುಸಜ್ಜಿತವಾದ ಪ್ರಯಾಣಿಕರ ತಂಗುದಾಣ ಶೀಘ್ರವಾಗಿ ನಿರ್ಮಿಸಬೇಕಿದೆಂದರು.

ಲ್ಯಾಂಕೋ ಅಧಿಕಾರಿ ಸುಧೀರ್ ಮಾತನಾಡಿ, ಎಲ್ಲಿ ಸಮಸ್ಯೆ ಇದೆ ಎಂಬುದು ನಮ್ಮ ಗಮನಕ್ಕೆ ಬಂದಿಲ್ಲ. ಆದ್ದರಿಂದ ಸಮಸ್ಯೆ ಇರುವ ಸ್ಥಳ ಗುರುತಿಸಿ ಆದಷ್ಟು ಬೇಗ ಸಮಸ್ಯೆ ಬಗೆ ಹರಿಸಲಾಗುವುದು ಎಂದು ಭರವಸೆ ನೀಡಿದರು.





### ಸುಸಜ್ಜಿತ ನಿಲ್ದಾಣ ನಿರ್ಮಿಸಿ

ಹಲಸಹಳ್ಳಿ ಗ್ರಾಮದ ವಿದ್ಯಾರ್ಥಿ ಜಶ್ವಂತ್ ರಾಜ್ ಮಾತನಾ, ಮಳೆ ಬಿಸಿಲಿನಲ್ಲಿ ರಸ್ತೆಯ ಬದಿಯಲ್ಲಿ ನಿಂತು ಬಸ್ಸಿಗಾಗಿ ಕಾಯುವ ಪರಿಸ್ಥಿತಿ ಇದೆ. ಇರುವ ತಂಗುದಾಣ ಬೀಳುವ ಹಂತದಲ್ಲಿದೆ. ಗಿಡಗೆಂಟೆಯಿಂದ ಮುಚ್ಚಿ ಹೋಗಿದೆ. ಕೂಡಲೇ ಸುಸಜ್ಜಿತ ಪ್ರಯಾಣಿಕರ ತಂಗುದಾಣ ನಿರ್ಮಿಸಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

### ಹಣ ಪೋಲು?

2019ರಲ್ಲಿ ಸಂಸದರ ಅನುದಾನದಲ್ಲಿ ಗುದ್ದಲಿ ಪೂಜೆ ಮಾಡಲಾಯಿತು. ಆದರೆ, ರಸ್ತೆ ಅಗಲೀಕರಣ ಮತ್ತು ಕೆ.ಸಿ.ವ್ಯಾಲಿ ಕಾಮಗಾರಿಯಿಂದಾಗಿ ಸಾರ್ವಜನಿಕರ ಹಣ ಪೋಲಾಗುವುದು ಬೇಡವೆಂದು ತಂಗುದಾಣ ನಿರ್ಮಿಸಿಲ್ಲ ಎಂದು ರವಿರಾಜ್ ಹಲಸಹಳ್ಳಿ ಹೇಳಿದರು.